# ಮೋಹಕ ರಚನೆಗಳ ಲೂರೇ ಕ್ಯಾವರ್ನ್ಸ್

ಭೂಗರ್ಭದಲ್ಲಿ ಅಡಗಿರುವ ನಿಸರ್ಗನಿರ್ಮಿತ 'ಲೂರೇ ಕ್ಯಾವರ್ನ್' ಗುಹೆಗಳ ಚಿತ್ರವಿಚಿತ್ರ ರಚನೆಗಳು ಸೋಜಿಗ ಹುಟ್ಟಿಸುತ್ತವೆ; ಅಮೋಘವಾದ ಚೆಲುವಿನಿಂದ ಗಮನಸೆಳೆಯುತ್ತಿವೆ.

■ ಧಾರಿಣಿ ಮಾಯಾ

ಹಳೆಯ ಸಿನಿಮಾ ಸೆಟ್‌ಗಳಲ್ಲಿ ಪಾತಾಳಲೋಕವನ್ನು ನಾವೆಲ್ಲಾ ನೋಡಿರುತ್ತೇವೆ. ಆದರೆ ಅದನ್ನು ಹೋಲುವ, ಅದಕ್ಕೂ ಮಿಗಿಲಾದ, ಮಾತಿನಲ್ಲಿ ವರ್ಣಿಸಲಾಗದಂಥ ಸಾವಿರಾರು ಪ್ರಕೃತಿನಿರ್ಮಿತ, ವಿಸ್ಮಯ ಹುಟ್ಟಿಸುವ, ಭಯಾನಕವಾದ ಅನೇಕ ಪಾತಾಳಲೋಕಗಳು ಭೂಗರ್ಭದಲ್ಲಿ ಅಡಗಿವೆ ಎಂದರೆ ನಂಬುವಿರಾ? ಅಂಥ ವಿಸ್ಮಯ ತಾಣಗಳಲ್ಲೊಂದು 'ಲೂರೇ ಕ್ಯಾವರ್ನ್ಸ್' (Luray Caverns).

ಮೊದಲು ಲೂರೇ ಕೇವ್ ಎಂದು ಕರೆಸಿಕೊಳ್ಳುತ್ತಿದ್ದ ಈ ಗುಹೆ, ಅಮೆರಿಕದ ವರ್ಜೀನಿಯಾದಲ್ಲಿ ಲೂರೇಯ ದಕ್ಷಿಣ ಭಾಗದಲ್ಲಿ ಕಂಡುಬಂದಿತು. ಶೆನಾಂಡ್‌ಡೋ ಕಣಿವೆ (Shenandoah Valley) ರಚನೆಯಾದ ಮೇಲೆ, ಲೂರೇ ಕ್ಯಾವರ್ನ್ಸ್ ರೂಪುಗೊಂಡಿತು.

ಈ ಗುಹೆಯಲ್ಲಿ ಸುಮಾರು 100 ಅಡಿ ಉದ್ದದ ಓಣಿಯಿದ್ದು, ಅದರ ಒಂದು ಬದಿ ಗೋಡೆ ಮೇಲೆ ಲೂರೇ ಕ್ಯಾವರ್ನ್ಸ್‌ನ ಸಂಪೂರ್ಣ ಹಿನ್ನೆಲೆ ಕುರಿತು ಭಿತ್ತಿಚಿತ್ರಗಳನ್ನು ಲಗತ್ತಿಸಲಾಗಿದೆ. ಅದನ್ನು ದಾಟಿ ಅಡಿಯಿಟ್ಟಾಗ ಎಂದೂ ಕಂಡಿರದ, ಊಹಿಸಲೂ ಆಗದ ಅದ್ಭುತ ಲೋಕವೇ ತೆರೆದುಕೊಳ್ಳುತ್ತದೆ. 1.25 ಮೈಲಿ ಉದ್ದ ಹಾಗೂ ಭೂಮಟ್ಟದಿಂದ 260 ಅಡಿ ತಳದಲ್ಲಿರುವ ಈ ಗುಹೆಯಲ್ಲಿ ಮೆಟ್ಟಿಲುಗಳ ಬದಲು ನಡೆಯಲು ಸುಲಭವಾಗುವಂತೆ ಉದ್ದಕ್ಕೂ ಬಹಳಷ್ಟು ತಿರುವುಗಳುಳ್ಳ ರ‍್ಯಾಂಪ್‌ಗಳಿವೆ.

ಸ್ವಲ್ಪ ಆಮ್ಲೀಯ ನೀರು ಕರಗುವಿಕೆ ಮತ್ತು ಮೆದುವಾದ ಬಂಡೆಗಳ ಸವೆತದಿಂದ ಈ ಗುಹೆ ಹಾಗೂ ಗುಂಡಿಗಳು ರಚನೆಯಾಗಿವೆ. ಇದನ್ನು ಕಾರ್ಸ್ಟ್ ಟೋಪೋಗ್ರಫಿ (karst topography) ಎನ್ನಲಾಗಿದೆ. ಕ್ಯಾಲ್ಸಿಯಂ ಕಾರ್ಬೋನೇಟ್ ಒಳಗೊಂಡ ಸೆಡಿಮೆಂಟರಿ ಬಂಡೆಯಾದ ಸುಣ್ಣದ ಕಲ್ಲಿನಿಂದ ಈ ಗುಹೆ ರಚನೆಯಾಗಿದೆ. ಸಮುದ್ರ ತಳದಲ್ಲಿ ಸಮುದ್ರಜೀವಿಗಳ ಅವಶೇಷಗಳು ನೆಲೆಸಿದ ಕಾರಣ ಸುಣ್ಣದ ಕಲ್ಲು ನೂರಾರು ಮಿಲಿಯನ್ ವರ್ಷಗಳಿಂದ ಶೇಖರಣೆಯಾಗಿ, ಕಾಲ ಕಳೆದಂತೆ ವಾತಾವರಣದ ಒತ್ತಡ, ಬಿಸಿಗೆ ಸುಣ್ಣದ ಕಲ್ಲಿನ ಬಂಡೆಗಳ ಪದರಗಳಾಗಿ ರೂಪಾಂತರಗೊಂಡಿವೆ.

ನೀರು, ರಾಸಾಯನಿಕ, ಖನಿಜಗಳಿಂದ ರೂಪುಗೊಂಡ ಕಾರಣ ಕ್ಯಾವರ್ನ್ಸ್ ಹಳದಿ, ಕಂದು ಮತ್ತು ಕೆಂಪು ಬಣ್ಣದಿಂದ ಕೂಡಿದೆ. ಈ ಗುಹೆ ಬಹಳ ತಣ್ಣಗಿದ್ದು, ಸದಾ 12 ಡಿಗ್ರಿಯ ತಾಪಮಾನ ಹೊಂದಿರುತ್ತದೆ.

1878ರಲ್ಲಿ ಆಂಡ್ರೂ ಕ್ಯಾಂಪ್ಬೆಲ್, ಬೆನ್ಟನ್ ಮತ್ತು ವಿಲಿಯಂ ಕ್ಯಾಂಪ್ಬೆಲ್ ಒಂದು ಸಿಂಕ್ ಹೋಲಿನ (ನೆಲದಲ್ಲಿರುವ ರಂಧ್ರ) ಅನ್ವೇಷಣೆಯಲ್ಲಿ ತೊಡಗಿದರು. ಆ ಜಾಗದಲ್ಲೆಲ್ಲೋ ಒಂದು ಗುಹೆ ಇರುವ ಸೂಚನೆ ಸಿಕ್ಕಿ ಅಲ್ಲಿ ಅಗೆಯಲು ಶುರುಮಾಡಿದರು. ಅಗೆಯುವಾಗ ಆ ಸಣ್ಣ ರಂಧ್ರದಿಂದ ತಣ್ಣನೆ ಗಾಳಿ ಹೊರಹೊಮ್ಮುತ್ತಿದ್ದುದು ಅನುಭವಕ್ಕೆ ಬಂದು, ಇದರಿಂದ ಅವರಿಗೆ ಭೂಮಿಯ ತಳದಲ್ಲಿ ಒಂದು ಕುಳಿ ಇರುವ ಸೂಚನೆ ಸಿಕ್ಕಿತು. ಈ ಅನ್ವೇಷಣೆಯಿಂದ ಉತ್ಸುಕರಾಗಿ ಆ ಸಣ್ಣ ಕುಳಿಯನ್ನು ಮತ್ತಷ್ಟು ಬಗೆಯುವ ಸಾಹಸ ಮಾಡಿದಾಗ ಕ್ಯಾವರ್ನ್ಸ್‌ನ ಸೌಂದರ್ಯ ಅವರನ್ನೆಲ್ಲ ಬೆರಗುಗೊಳಿಸಿತು.

ಈ ಕ್ಯಾವರ್ನ್ಸ್ ಗುಹೆಯು ಸ್ತಂಭ, ಹರಿವ ಕಲ್ಲು, ಮಣ್ಣಿನ ಕಲ್ಲು, ತೂಗುತೊಂಗಲು (stalactites), ನೆಲತೊಂಗಲು (stalagmites), ಕನ್ನಡಿಯ ಕೊಳದಿಂದ ಅಲಂಕೃತವಾಗಿದೆ. ಇಲ್ಲಿರುವ 20 ಇಂಚಿನ ಆಳದ ಡ್ರೀಮ್ ಲೇಕ್ ಅಥವಾ ಕನ್ನಡಿ ಕೊಳಕ್ಕೆ ಗಾಳಿಯಿಂದ ಅಡಚಣೆ ಇರದ ಕಾರಣ ನೋಡುಗರಿಗೆ ಭ್ರಮೆ ಹುಟ್ಟಿಸುತ್ತದೆ. ತೂಗುತೊಂಗಲು ಚಾವಣಿಯಿಂದ ಇಳಿದರೆ, ನೆಲತೊಂಗಲು ಭೂಮಿಯಿಂದ ಎದ್ದು ಬೆಳೆಯಲು ಶುರುವಾಗುತ್ತದೆ. ಈ ಎರಡೂ ಕೂಡಿಕೊಂಡಾಗ ಅದನ್ನು ಟೈಟಾನಿಯಾಸ್ ವೇಲ್ (titania's veil) ಎಂದು ಕರೆಯಲಾಗಿದೆ. ಹಿಮಬಿಳಲಿನ ರಚನೆಯಿಂದ ಅಲ್ಲಲ್ಲಿ ನೀರು ಜಿನುಗುತ್ತಿರುವುದನ್ನು ಇಂದಿಗೂ ಕಾಣಬಹುದು.

ಗುಹೆಯೊಳಗಿನ ಆಕಾರಗಳು ಬೃಹತ್ ಹಾವಿನ ಹುತ್ತದಂತೆ ತೋರುತ್ತವೆ. ಇವುಗಳು ನೋಡಲು


ಬಯಸಿದ್ದನ್ನು ನೀಡುವ 'ವಿಷಿಂಗ್ ವೆಲ್'


ಮೋಡಿ ಮಾಡುವ 'ಟೈಟಾನಿಯಾಸ್ ವೇಲ್'